**MVC 179/2022**
**RW-3**

(ಇಂದು ದಿನಾಂಕಃ 30-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆ 4ನೇ ಎದುರುದಾರರ ಪರ ಮಾನ್ಯ ಶ್ರೀ VRM ವಕೀಲರಿಂದ:**

1. ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಂತಹ ವಿಷಯಗಳು ಸರಿಯಾಗಿರುತ್ತದೆ. ಅದನ್ನು ನಾನೇ ಹೇಳಿ ಬರೆಸಿದ್ದೇನೆ.

- ಮದುವೆಯ ಆಮಂತ್ರಣ ಪತ್ರಿಕೆಗಳನ್ನು ಹಾಜರುಪಡಿಸಿದ್ದು ನಿ.ಆರ್-7 ಮತ್ತು ನಿ.ಆರ್-8 ಎಂದು ಗುರುತಿಸಲಾಯಿತು.
- ಮದುವೆಯ 4 ಭಾವಚಿತ್ರಗಳನ್ನು ಒಟ್ಟಾರೆಯಾಗಿ ನಿ.ಆರ್-9 ಎಂದು ಗುರುತಿಸಲಾಯಿತು.
- ಆಧಾರ ಕಾರ್ಡಿನ ಮೂಲ ಪ್ರತಿಯನ್ನು ನೋಡಿ ಅದರ ಪ್ರತಿಯನ್ನು ನಿ.ಆರ್-10 ಎಂದು ಗುರುತಿಸಲಾಯಿತು.
- MVOP NO. 62/2022 ರಲ್ಲಿ ಸಲ್ಲಿಸಿದ ದೃಢಿಕೃತ ಪ್ರಮಾಣ ಪತ್ರವನ್ನು ನಿ.ಆರ್-11 ಎಂದು ಗುರುತಿಸಲಾಯಿತು.
- MVOP NO. 62/2022 ರಲ್ಲಿ ಸಲ್ಲಿಸಿದ ದೃಢಿಕೃತ ಅರ್ಜಿಯನ್ನು ನಿ.ಆರ್-12 ಎಂದು ಗುರುತಿಸಲಾಯಿತು.
- MVOP NO. 62/2022 ರಲ್ಲಿ ಸಲ್ಲಿಸಿದ ದೃಢಿಕೃತ ತಕರಾರನ್ನು ನಿ.ಆರ್-13 ಎಂದು ಗುರುತಿಸಲಾಯಿತು.
- MVOP NO. 62/2022 ರಲ್ಲಿ ಸಲ್ಲಿಸಿದ ಪ್ರಮಾಣ ಪತ್ರವನ್ನು ನಿ.ಆರ್-14 ಎಂದು ಗುರುತಿಸಲಾಯಿತು.
- MVOP NO. 62/2022 ರಲ್ಲಿ ಸಲ್ಲಿಸಿದ ದೃಢಿಕೃತ ಅರ್ಜಿಯನ್ನು ನಿ.ಆರ್-15 ಎಂದು ಗುರುತಿಸಲಾಯಿತು.
- MVOP NO. 62/2022 ರಲ್ಲಿ ಸಲ್ಲಿಸಿದ ದೃಢಿಕೃತ ತಕರಾರನ್ನು ನಿ.ಆರ್-16 ಎಂದು ಗುರುತಿಸಲಾಯಿತು.
- MVOP NO. 62/2022 ರಲ್ಲಿ ಸಲ್ಲಿಸಿದ ಪ್ರಮಾಣ ಪತ್ರವನ್ನು ನಿ.ಆರ್-17 ಎಂದು ಗುರುತಿಸಲಾಯಿತು.
- MVOP NO. 62/2022 ರಲ್ಲಿ ಸಲ್ಲಿಸಿದ ದೃಢಿಕೃತ ಅರ್ಜಿಯನ್ನು ನಿ.ಆರ್-18 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಇಲ್ಲಃ**

**<u>ಪಾಟೀ ಸವಾಲುಃ ಅರ್ಜಿದಾರರ ಪರ ಮಾನ್ಯ BVP ವಕೀಲರಿಂದಃ</u>**

ನನಗೆ ಹಿಂದಿ ಮಾತನಾಡಲು ಬರುತ್ತದೆ. ಮೃತ ಉಮೇಶನ ಕುಟುಂಬದ ಜೊತೆ ಮದುವೆಗಿಂತ ಮೊದಲು ನಮ್ಮ ಕುಟುಂಬದ ಸಂಬಂಧ ಇರಲಿಲ್ಲ. ನಮ್ಮ ಚಿಕ್ಕಪ್ಪನ ಮಧ್ಯಸ್ಥಿಕೆಯಲ್ಲಿ ಹಿರಿಯರ ಸಮಕ್ಷಮ ನನ್ನ ಮದುವೆಯನ್ನು ಮೃತ ಉಮೇಶನ ಜೊತೆ ಮಾಡಿ ಕೊಟ್ಟಿರುತ್ತಾರೆ. ಮೃತ ಉಮೇಶ ಪುಣೆಯಲ್ಲಿ ದಿನಗೂಲಿ ಮಾಡುತ್ತಿದ್ದ ಎಂದರೆ ಸರಿ. ನಾನೂ ಸಹ ಮದುವೆಗಿಂತ ಮುಂಚೆ ಪುಣೆಯಲ್ಲಿ ದಿನಗೂಲಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ.

ನಾನು ಪುಣೆಯಲ್ಲಿ ದಿನಗೂಲಿ ಮಾಡುತ್ತಿದ್ದರಿಂದ ಉಮೇಶನ ಪರಿಚಯವಾಗಿ ನಮ್ಮಿಬ್ಬರ ವಿವಾಹ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿದ ಮದುವೆಯ ಭಾವಚಿತ್ರಗಳಲ್ಲಿ ನನ್ನ ಮತ್ತು ಮೃತ ಉಮೇಶನ ತಂದೆ ತಾಯಿಯನ್ನು ಹೊರತುಪಡಿಸಿ ಬೇರೆ ಯಾರೂ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮದುವೆಯ ಎಲ್ಲಾ ಭಾವಚಿತ್ರಗಳನ್ನು ಹಾಜರುಪಡಿಸಲು ಸಿದ್ದಳಿರುತ್ತೇನೆ.

ಮದುವೆಯಾಗಿ ಮೃತ ಉಮೇಶನ ಮನೆಯಲ್ಲಿ 2 ದಿನ ಸಹ ನಾನು ಇರಲಿಲ್ಲ ಎಂದರೆ ಸರಿಯಲ್ಲ. ಮೃತ ಉಮೇಶನಿಗೆ ಮೊದಲನೆ ಹೆಂಡತಿ ಎದುರುದಾರ 1 ಮತ್ತು ಆಕೆಗೆ ಇಬ್ಬರು ಮಕ್ಕಳು ಇರುವುದನ್ನು ತಿಳಿದು ನಾನು ಉಮೇಶನ ಜೊತೆ ಇರುವುದನ್ನು ಬಿಟ್ಟು ನನ್ನ ತಂದೆ ತಾಯಿ ಜೊತೆ ವಾಸವಾಗಿರುತ್ತೇನೆ ಎಂದರೆ ಸರಿಯಲ್ಲ. ನಾನು ಮದುವೆ ಆಗುವ ಕಾಲಕ್ಕೆ ಮೃತ ಉಮೇಶನಿಗೆ ಯಾವುದೇ ಮದುವೆ ಆಗಿರಲಿಲ್ಲ. ಉಮೇಶನ ಜೊತೆ ಬಾಳಲು ಇಷ್ಟ ಇಲ್ಲದ ಕಾರಣ ನಾನು ನನ್ನ ತಂದೆ ತಾಯಿ ಮನೆಯಲ್ಲಿ ಉಳಿದಿರುತ್ತೇನೆ ಎಂದರೆ ಸರಿಯಲ್ಲ.

ಅಪಘಾತವಾದ ಸ್ಥಳವು ನಾವು ಇರುವ ತಾಂಡಾದಿಂದ 40 ಕಿ.ಮೀ ಗಿಂತ ದೂರದಲ್ಲಿ ಆಗಿರುತ್ತದೆ ಎಂದರೆ ಸರಿ. ದೂರನ್ನು ನಾನೇ ನೀಡಿರುತ್ತೇನೆ ಎಂದರೆ ಸರಿ. ದೂರನ್ನು ನೀಡಬೇಕಾದರೆ ನನ್ನ ಮತ್ತು ಉಮೇಶನ ತಾಯಿಯ ನಡುವೆ ತಕರಾರು ಆಗಿರುತ್ತದೆ ಎಂದರೆ ಸರಿ. ನನ್ನ ಮಗ ನನಗೆ ಮತ್ತು ಉಮೇಶನಿಗೆ ಹುಟ್ಟಿದ ಮಗ ಅಲ್ಲ ಎಂದರೆ ಸರಿಯಲ್ಲ. ನನ್ನ ಮಗ ಯಾವುದೇ ಪರಿಹಾರವನ್ನು ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

**<u>(1 ರಿಂದ 3ನೇ ಎದುರುದಾರರ ಪರ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು)</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ,
ಚಿಂಚೋಳಿ.